RNU AIR DHARWAD

# OCTOBER 20, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಪ್ರಯೋಗಾಲಯದ ಫಲಿತಾಂಶಗಳು, ರೈತರನ್ನು ತಲುಪುವಲ್ಲಿ, ಕೃಷಿ–ತೋಟಗಾರಿಕೆ ಮೇಳಗಳು ಸಹಕಾರಿ – ಮಧು ಬಂಗಾರಪ್ಪ.
- ದೇಶಿ ಉತ್ಪನ್ನಕ್ಕೆ, ಪಶುಪಾಲನೆ ಮತ್ತು ಹೈನುಗಾರಿಕೆಯಿಂದ, ಶೇಕಡ 5 ರ ಷ್ಟು ಕೊಡುಗೆ – ಎಚ್.ಸಿ. ಮಹದೇವಪ್ಪ.
- ಕಾಳಿದಾಸ ಸಮ್ಮಾನ್; ಗಂಜೀಫಾ ಕಲೆಯ, ಮೈಸೂರಿನ ರಘುಪತಿ ಭಟ್ಟ ಆಯ್ಕೆ.
- ಖ್ಯಾತ ವಿಮರ್ಶಕ, ಡಾಕ್ಟರ್ ಜಿ. ಎಸ್. ಆಮೂರ ಜನ್ಮ ಶತಮಾನೋತ್ಸವಕ್ಕೆ, ಧಾರವಾಡದಲ್ಲಿ, ಇಂದು ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರ, ವೈಜ್ಞಾನಿಕ ಸಂಶೋಧನೆಗಳ ತಳಹದಿಯ ಮೇಲೆ, ಪುನರುತ್ಥಾನಗೊಳ್ಳಬೇಕಿದೆ. ಪ್ರಯೋಗಾಲಯದ ಫಲಿತಾಂಶಗಳು ರೈತರ ಭೂಮಿಯನ್ನು ತಲುಪುವಲ್ಲಿ, ಕೃಷಿ–ತೋಟಗಾರಿಕೆ ಮೇಳಗಳು ಸಹಕಾರಿ ಎಂದು, ಶಿವಮೊಗ್ಗ ಜಿಲ್ಲೆ ಉಸ್ತವಾರಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನವುಲೆ ಕೃಷಿ ಕಾಲೇಜು ಆವರಣದಲ್ಲಿ, 'ಪೌಷ್ಟಿಕ ಆಹಾರಕ್ಕಾಗಿ ವಿಕಸಿತ ಕೃಷಿ' ಧ್ಯೇಯದೊಂದಿಗೆ ಆಯೋಜಿಸಿದ್ದ, ಕೃಷಿ–ತೋಟಗಾರಿಕೆ ಮೇಳದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಶಾಲಾ ವಿದ್ಯಾರ್ಥಿಗಳಿಗೆ, ವಾರದಲ್ಲಿ ಒಂದು ದಿನ, ಸಾಮಾನ್ಯ ಜ್ಞಾನ ಕಲಿಕೆ ತರಗತಿ ಪ್ರಾರಂಭಿಸಲಾಗುವುದು. ವ್ಯಕ್ತಿತ್ವ ವಿಕಸನ, ಕೃಷಿ, ತೋಟಗಾರಿಕೆ ಮತ್ತು ಸ್ವಯಂ ಉದ್ಯೋಗ ಕೌಶಲ ತರಬೇತಿ ಬಗ್ಗೆ ತಿಳಿಸಲಾಗುವುದು ಎಂದರು.

<><><>

ಪಶುಪಾಲನೆ ಮತ್ತು ಹೈನುಗಾರಿಕೆಯಿಂದ, ಒಟ್ಟು ದೇಶಿ ಉತ್ಪನ್ನಕ್ಕೆ, ಶೇಕಡ 5 ರ ಷ್ಟು ಕೊಡುಗೆ ಇದೆ. ಹೆಣ್ಣು ಕರುಗಳೇ ಜನಿಸುವಂತೆ, ಕೃತಕ ಗರ್ಭಧಾರಣೆ ತಂತ್ರಜ್ಞಾನ ಮುಂದುವರೆದಿದ್ದು, ಹೈನುಗಾರರಿಗೆ ಅನುಕೂಲವಾಗಿದೆ ಎಂದು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ, ಪಶು ವೈದ್ಯರ ರಾಜ್ಯ ಮಟ್ಟದ ತಾಂತ್ರಿಕ ವಿಚಾರ ಸಂಕಿರಣ ಉದ್ಘಾಟಿಸಿ, ಅವರು ಮಾತನಾಡಿದರು. ಟಿಪ್ಪು ಸುಲ್ತಾನ್, ಹಳ್ಳಿಕಾರ್ ತಳಿ ಸಂವರ್ಧನೆಗೆ, ವಿಶೇಷ ಕೊಡುಗೆ ನೀಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ, ರಾಸುಗಳ ಬಳಕೆಯಿಂದ ಭೂಮಿಯ ಫಲವತ್ತತೆ, ಫಸಲಿನ ಆರೋಗ್ಯ ಮತ್ತು ಸಾವಯವ ಪದಾರ್ಥಗಳ ಬಳಕೆಯಿಂದ ಜನ ಸಾಮಾನ್ಯರ ಅಪೌಷ್ಟಿಕತೆ ನೀಗಿಸಬಹುದು, ಎಂದರು.

<><><>

ಪಶುಸಂಗೋಪನಾ ಖಾತೆ ಸಚಿವ ಕೆ.ವೆಂಕಟೇಶ್ ಅವರು ಮಾತನಾಡಿ, ಸರ್ಕಾರ ನೂತನವಾಗಿ ಎರಡು ಪಶು ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲಿದೆ. ಸದ್ಯದಲ್ಲೇ ನಾಲ್ಕು ನೂರು ಜನ ಪಶು ವೈದ್ಯರ ನೇಮಕಾತಿಯಾಗಲಿದೆ. ಕಾಲು ಬಾಯಿ ಜ್ವರದ ಲಸಿಕೆಯನ್ನು ಸರ್ಕಾರ ಉಚಿತವಾಗಿ ನೀಡುತ್ತಿದ್ದು, ರೈತಾಪಿ ವರ್ಗ ತಪ್ಪದೇ ತಮ್ಮ ರಾಸುಗಳಿಗೆ ಲಸಿಕೆ ಹಾಕಿಸಬೇಕು ಎಂದರು.

<><><>

ಪಶುಪಾಲನಾ ಇಲಾಖೆ, ಕಾಲು ಬಾಯಿ ರೋಗ ತಡೆಗೆ, ರಾಜ್ಯಾದ್ಯಂತ ನಾಳೆಯಿಂದ, ನವೆಂಬರ್ 20ರ ವರೆಗೆ, ಬೆಳಗ್ಗೆ 6.30 ರಿಂದ 11 ಗಂಟೆ ವರೆಗೆ, ಜಾನುವಾರುಗಳಿಗೆ, ಕಾಲುಬಾಯಿ ಲಸಿಕೆ ನೀಡಲಿದೆ. ರೈತರು ತಮ್ಮ ಜಾನುವಾರುಗಳಿಗೆ, ಕಡ್ಡಾಯವಾಗಿ ಲಸಿಕೆ ಹಾಕಿಸಬೇಕೆಂದು, ಪಶು ಸಂಗೋಪನಾ ಇಲಾಖೆ ಮನವಿ, ಮಾಡಿದೆ.

<><><>

ನೈಸರ್ಗಿಕವಾಗಿ ಗಾಯಗೊಂಡ ವನ್ಯಜೀವಿಗಳಿಗೆ, ನಿಸರ್ಗದಲ್ಲಿ ಗುಣಮುಖವಾಗುವ ಪ್ರಕ್ರಿಯೆಗಳಿದ್ದು, ಆಕಸ್ಮಿಕವಾಗಿ ಮೃತಪಟ್ಟರೂ, ಕಳೇಬರವನ್ನು ಅವಲಂಬಿಸಿ, ಅನೇಕ ವನ್ಯಜೀವಿಗಳು ಬದುಕುತ್ತವೆ. ಸತ್ತ ವನ್ಯಜೀವಿಗಳ ಕಳೇಬರವನ್ನು ನಿಸರ್ಗದಲ್ಲೇ ಬಿಡುವ ಅರಣ್ಯ ಇಲಾಖೆಯ ನಿರ್ಧಾರ, ರಣಹದ್ದುಗಳಂತಹ, ಮಾಂಸಾಹಾರಿ ವನ್ಯಜೀವಿಗಳ ಪುನರುಜ್ಜೀವನಕ್ಕೆ ಸಾಕ ಷ್ಟು ಸಹಕಾರಿಯಾಗಿದೆ.

<><><>

ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಧಾಮ, ರಕ್ಷಿತಾರಣ್ಯಗಳಲ್ಲಿ ನೈಸರ್ಗಿಕವಾಗಿ ಗಾಯಗೊಂಡ, ವನ್ಯಜೀವಿಗಳಿಗೆ ಚಿಕಿತ್ಸೆ ನೀಡದಂತೆ, ಹೊಳೆಮತ್ತಿ ನೇಚರ್ ಕಾನ್ಸರ್ವೇಶನ್ ಫೌಂಡೇಷನ್ ಹಿರಿಯ ವಿಜ್ಞಾನಿ, ಸಂರಕ್ಷಣಾ ತಜ್ಞ ಡಾಕ್ಟರ್ ಸಂಜಯ್ ಗುಬ್ಬಿ, ಆಕಾಶವಾಣಿ ಮೂಲಕ ಮನವಿ ಮಾಡಿದ್ದಾರೆ.

<><><>

ಡಾಕ್ಟರ್ ಸಂಜಯ್ ಗುಬ್ಬಿ ಧ್ವನಿ 50 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

**(42 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

ಭಾರತೀಯ ಸಂಸ್ಕೃತಿ ಮತ್ತು ಕಲೆಯಲ್ಲಿ ಜೀವಮಾನ ಸಾಧನೆಗಾಗಿ, ಮಧ್ಯಪ್ರದೇಶ ಸರ್ಕಾರ ನೀಡುವ, 2023 ನೇ ಸಾಲಿನ ಕಾಳಿದಾಸ ಸಮ್ಮಾನಕ್ಕೆ, ಗಂಜೀಫಾ ಕಲೆಯನ್ನು ಪುನರುಜ್ಜೀವಿತಗೊಳಿಸಿದ, ಮೈಸೂರಿನ ರಘುಪತಿ ಭಟ್ಟ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 5 ಲಕ್ಷ ರೂಪಾಯಿ ನಗದು, ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ನವೆಂಬರ 12 ರಂದು ಉಜ್ಜಯಿನಿಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.  ದಕ್ಷಿಣಕನ್ನಡದಲ್ಲಿ 1957 ರಲ್ಲಿ ಜನಿಸಿದ, ರಘುಪತಿ ಭಟ್ಟ, 50 ವರ್ಷದಿಂದ ಭಾರತೀಯ ಶಾಸ್ತ್ರೀಯ ಚಿತ್ರಕಲೆ ರಚನೆಯಲ್ಲಿ ತೊಡಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಗಂಜೀಫಾ ರಘುಪತಿ ಭಟ್ ಧ್ವನಿ 50 ಸೆಕೆಂದುಗಳು**

<><><>

ಧಾರವಾಡದ ಜಿ.ಬಿ. ಜೋಶಿ ಮೆಮೋರಿಯಲ್ ಟ್ರಸ್ಟ್ ಹಾಗೂ ಡಾಕ್ಟರ್ ಜಿ. ಎಸ್. ಆಮೂರ ಜನ್ಮ ಶತಮಾನೋತ್ಸವ ಸಮಿತಿ, ಧಾರವಾಡದ ಆಲೂರು ವೆಂಕಟರಾವ್ ಸಭಾಭವನದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ಡಾಕ್ಟರ್ ಎಚ್.ಎಸ್. ರಾಘವೇಂದ್ರರಾವ್ ಉದ್ಘಾಟಿಸಲಿದ್ದಾರೆ. ಖ್ಯಾತ ವಿಮರ್ಶಕ ಡಾಕ್ಟರ್ ಗುರುರಾಜ ಶಾಮಾಚಾರ್ಯ ಆಮೂರ ಅವರಿಗೆ, ದೇಶದ ಗಣ್ಯರು ಬರೆದಿರುವ, ಅರವತ್ತು ಅಪರೂಪದ ಪತ್ರಗಳ ಪ್ರದರ್ಶಿನಿ ಸಹ ಆಯೋಜಿತವಾಗಿದೆ. ನಾಡಿನ ಖ್ಯಾತ ವಿಮರ್ಶಕರು ಪಾಲ್ಗೊಳ್ಳಲಿದ್ದಾರೆ.

<><><>

'ಸಿತಾರ ಮಾಂತ್ರಿಕ ಉಸ್ತಾದ್ ಹಮೀದ್ ಖಾನ್ ಸಂಗೀತ ಸಾಧಕ ಪ್ರಶಸ್ತಿ'ಯನ್ನು, ಪುಣೆಯ ಹಿರಿಯ ಗಾಯಕ, ಪಂಡಿತ ಆನಂದ ಭಾಟೆ ಅವರಿಗೆ, ಇಂದು ಸಂಜೆ 5 ಗಂಟೆಗೆ ಧಾರವಾಡದ ಸೃಜನಾ ರಂಗ ಮಂದಿರದಲ್ಲಿ ಪ್ರದಾನ ಮಾಡಲಾಗುತ್ತಿದೆ. ಧಾರವಾಡ ಘರಾಣೆಯ ಪ್ರಸಿದ್ಧ ಸಿತಾರ ವಾದಕರಾಗಿದ್ದ, ಉಸ್ತಾದ್ ಹಮೀದ್ ಖಾನ್ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ, ಖ್ಯಾತ ಕವಿ ಜಯಂತ ಕಾಯ್ಕಿಣಿ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಂಗೀತ ವಾದ್ಯ ಉಪಕರಣಗಳ ತಯಾರಕ, ಮೀರಜ್ ನ ನೌಶಾದ್ ಗುಲಾಬ್ ಸಾಹೇಬ್ ಸಿತಾರಮೇಕರ್ ಅವರನ್ನು, ಸನ್ಮಾನಿಸಲಾಗುತ್ತಿದೆ.

<><><>

ಶಿಗ್ಗಾಂವಿ ವಿಧಾನಸಭಾ  ಕ್ಷೇತ್ರದ ಉಪ ಚುನಾವಣೆಗೆ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪುತ್ರ, ಉದ್ಯಮಿ ಭರತ ಬೊಮ್ಮಾಯಿ ಹಾಗೂ ಸಂಡೂರು ಕ್ಷೇತ್ರದಿಂದ ಬಿಜೆಪಿ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಬಿಜೆಪಿ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲಿದ್ದಾರೆ. ಕಾಂಗ್ರೆಸ್ ಎರಡು ಕ್ಷೇತ್ರಗಳಿಗೆ ಈಗಾಗಲೇ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಚನ್ನಪಟ್ಟಣ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿ ಯಾರು? ಎಂಬ ಬಗ್ಗೆ ಕುತೂಹಲ ಅರಳಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

ಪರಿಶಿ ್ಟ ಪಂಗಡದವರಿಗೆ, ಒಳ ಮೀಸಲಾತಿ ಕಲ್ಪಿಸುವ ಸಂಬಂಧ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ, ಗೃಹ ಕಚೇರಿ ಕೃ ್ಣದಲ್ಲಿ ಮಹತ್ವದ ಸಭೆ ನಡೆಯಿತು.

<><><>

ಮಡಿಕೇರಿ ದಸರಾ ಯಶಸ್ವಿಗೆ ಸಹಕರಿಸಿದ ಹಾಗೂ ಪರಿಸರ ಶುಚಿತ್ವಕ್ಕೆ ಹೆಚ್ಚಿನ ಒತ್ತು ನೀಡಿದ, ಪೌರ ಕಾರ್ಮಿಕರಿಗೆ ಜಿಲ್ಲಾಡಳಿತ ಕೃತಜ್ಞತೆ ಸಲ್ಲಿಸಿದೆ.

<><><>

ಮೈಸೂರು ನಗರಭಿವೃದ್ಧಿ ಪ್ರಾಧಿಕಾರದಲ್ಲಿ, ಕೇಂದ್ರ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಎರಡನೇ ದಿನವಾದ ನಿನ್ನೆ ಸಹ ಪರಿಶೀಲನೆ ಮುಂದುವರೆಸಿದರು.

<><><>

ಬಳ್ಳಾರಿ ಜಿಲ್ಲೆ, ಸಂಡೂರು ವಿಧಾನಸಭೆ ಉಪಚುನಾವಣೆ ಕರ್ತವ್ಯ ನಿರತ ಸಿಬ್ಬಂದಿ, ಅಂಚೆ ಮೂಲಕ ಮತದಾನ ಮಾಡಲು ಅವಕಾಶವಿದೆ ಎಂದು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ತಿಳಿಸಿದ್ದಾರೆ.

<><><>

ಮಂಡ್ಯ ಉದ್ಯೋಗ ಮೇಳದಲ್ಲಿ, ಸಾವಿರಕ್ಕೂ ಹೆಚ್ಚು ಜನರಿಗೆ, ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ ಎಂದು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

<><><>

ಕೊಡಗು ಜಿಲ್ಲೆ, ಹಾರಂಗಿ ಜಲಾಶಯ ಭರ್ತಿಯಾಗಿದ್ದು, ಶಾಸಕರಾದ ಮಂತರಗೌಡ, ಎ.ಮಂಜು ಹಾಗೂ ಎಂ.ಪಿ.ಸುಜಾ ಕುಶಾಲಪ್ಪ, ಕಾವೇರಿ ಪ್ರತಿಮೆಗೆ  ಗೌರವ ಸಲ್ಲಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರಯೋಗಾಲಯದ ಫಲಿತಾಂಶಗಳು, ರೈತರನ್ನು ತಲುಪುವಲ್ಲಿ, ಕೃಷಿ–ತೋಟಗಾರಿಕೆ ಮೇಳಗಳು ಸಹಕಾರಿ – ಮಧು ಬಂಗಾರಪ್ಪ.
- ದೇಶಿ ಉತ್ಪನ್ನಕ್ಕೆ, ಪಶುಪಾಲನೆ ಮತ್ತು ಹೈನುಗಾರಿಕೆಯಿಂದ, ಶೇಕಡ 5 ರ ್ಟ ಕೊಡುಗೆ – ಎಚ್.ಸಿ. ಮಹದೇವಪ್ಪ.
- ಕಾಳಿದಾಸ ಸಮ್ಮಾನ್; ಗಂಜೀಫಾ ಕಲೆಯ, ಮೈಸೂರಿನ ರಘುಪತಿ ಭಟ್ಟ ಆಯ್ಕೆ.
- ಖ್ಯಾತ ವಿಮರ್ಶಕ, ಡಾಕ್ಟರ್ ಜಿ. ಎಸ್. ಆಮೂರ ಜನ್ಮ ಶತಮಾನೋತ್ಸವಕ್ಕೆ, ಧಾರವಾಡದಲ್ಲಿ, ಇಂದು ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ